# ಯುಗನದ್ಧ

ನನ್ನ ಅಹಮಿಕೆಯ ಪಕಳೆಗಳೊಂದೊಂದನೇ ಕಳಚಿದ ನೀನು
ತೆರೆವ ಗುರುವ್ರೋ ಕವಿವ ಮರೆವ್ರೋ ತಿಳಿಯದಾದೆ ಸಖಿಯೇ

ಸುರಿವ ಕನಸುಗಳ ಮುಂದೆ ನನ್ನ ಬೊಗಸೆಯೊಡ್ಡಿಸಿದ ನೀನು
ಮನಸಿನ ಮುನ್ನುಡಿಯೋ ಮಾಯಾ ಕನ್ನಡಿಯೋ ಅರಿಯದಾದೆ ಸಖಿಯೇ

ಇದೆ ಇಲ್ಲವೆಂಬ ಹಣತೆಯ ಕೈಗಿಟ್ಟು ನಂದಿಸಿ ಹೋದ ನೀನು
ನಡೆವ ದಾರಿಯೋ ಸೇರುವ ಗುರಿಯೋ ಕಾಣದಾದೆ ಸಖಿಯೇ

ಅಂತರಂಗಕೆ ಕರೆದು ಕದವ ತೆರೆದು ಬಯಲುಮಂಟಪವಾದ ನೀನು
ಸೆರಗ ಮರೆಯೋ ಅಂಗೈಯ ಬೆಳಕೋ ಅರಿಯದಾದೆ ಸಖಿಯೇ

ಬೇಕು ಬೇಡಗಳ ನೋಡಿ ಮಗುವಂತೆ ರಮಿಸಿದ ನೀನು
ಪ್ರಿಯತಮೆಯೋ ಬೆನ್ನ ಕಾಯುವ ಗೆಳತಿಯೋ ತಿಳಿಯದಾದೆ ಸಖಿಯೇ

ಕಾಡುಮಲ್ಲಿಗೆ ನನ್ನ ಮುಡಿಗೇರಿಸಿ ನುಡಿಯಾಗಿಸಿದ ನೀನು
ತೊಟ್ಟು ಕಳಚಿದ ಹಣ್ಣೋ ನನ್ನೊಳಗಿನ ಕಣ್ಣೋ ಅರಿಯದಾದೆ ಸಖಿಯೇ

ಒಮ್ಮೆ ಸೋಲಿಸುವೆ ಮತ್ತೊಮ್ಮೆ ಗೆಲ್ಲಿಸುವ ಎಲ್ಲವೂ ನಿನ್ನ ಚಿತ್ತ
ನಾನು ನಿನ್ನೊಳಗೋ ನೀನು ನನ್ನೊಳಗೋ ತಿಳಿಯದಾದೆ ಸಖಿಯೇ

❖ ಎಸ್ ನಟರಾಜ ಬೂದಾಳು

